# ಲೆಗ್ ಬ್ರೇಕ್



ಶಾಲೆಗೆ ರಜೆ ಇದ್ದರೆ ಮುಗಿಯಿತು. ನಮ್ಮ ಮನೆಯವರು ಹಾಗೂ ಎಂಟರ ಮೊಮ್ಮಗನ ನಡುವೆ ರಿಮೋಟ್ ಕದನ ಇದ್ದಿದ್ದೇ. ಮೊಮ್ಮಗನಿಗೆ ಮೊಬೈಲ್ ಸಿಗುವುದಿಲ್ಲವೆಂದು ಖಾತ್ರಿಯಾಗುತ್ತಿದ್ದಂತೆ ಟೀವಿ ರಿಮೋಟ್ ಗಾಗಿ ಇನ್ನಿಲ್ಲದ ಕಿತಾಪತಿ ನಡೆಸುತ್ತಾನೆ. ಆದರೆ ಕ್ರಿಕೆಟ್ ಮ್ಯಾಚ್ ಇದ್ದಾಗ ಅಜ್ಜನಿಗೂ–ಮೊಮ್ಮಗನಿಗೂ ಪೈಪೋಟಿ ಏರ್ಪಡುತ್ತದೆ. ಇತ್ತೀಚೆಗೆ ಇವರು ಟೀವಿಯಲ್ಲಿ ಭಾರತ ವೆಸ್ಟ್ ಇಂಡೀಸ್ ಏಕದಿನ ಕ್ರಿಕೆಟ್ ಮ್ಯಾಚ್ ನೋಡುತ್ತಿದ್ದರು. ಮೊಮ್ಮಗ ಅವಕಾಶಕ್ಕಾಗಿ ಹೊಂಚು ಹಾಕುತ್ತಿದ್ದ.

ಹಾಗೆ ಬೌಲರನ 'ಲೆಗ್ ಬ್ರೇಕ್' ಬೌಲಿಂಗ್ ಬಗ್ಗೆ ವೀಕ್ಷಕ ವಿವರಣೆ ನೀಡುತ್ತಿದ್ದರು. ಕ್ರಿಕೆಟ್ ಪರಿಭಾಷೆಯ ಅರಿವಿಲ್ಲದ ಇವನು, 'ಬೌಲರಿನ ಲೆಗ್ ಬ್ರೇಕ್ ಆಯ್ತಲ್ಲ, ಕೇಳಿಸುತ್ತಿಲ್ಲವೆ? ಇನ್ನೆಲ್ಲಿಯ ಮ್ಯಾಚ್? ರಿಮೋಟ್ ತತ್ತಾ...' ಎನ್ನುತ್ತಾ ಚಕ ಚಕನೆ ಟೀವಿ ರಿಮೋಟ್ ಕಿತ್ತುಕೊಂಡು ತನ್ನ ನೆಚ್ಚಿನ ಚಿಂಟು ವಾಹಿನಿಯತ್ತ ತಿರುಗಿಸಿಯೇ ಬಿಟ್ಟ.

**ಹೊಸೂರು ರತ್ನಾಕರ ಶೆಟ್ಟಿ**

---



ಕಲೆ: ಗಣೇಶ ಆಚಾರ್ಯ

# ಕುಂಟಿ ಕಥೆ

ಆವತ್ತು ಶಾಲೆಯಿಂದ ಬಂದವಳೇ ನನ್ನತ್ತ ಓಡಿ ಬಂದು, 'ಅಜ್ಜಾ, ನಿನಗೆ ಕುಂಟಿ ಕಥೆ ಗೊತ್ತಾ?' ಎಂದ ಮೊಮ್ಮಗಳ ಪ್ರಶ್ನೆಗೆ ತಬ್ಬಿಬ್ಬಾದೆ. 'ಯಾವ ಕುಂಟಿಯಪ್ಪಾ ಇದು? ಗೊತ್ತಿಲ್ಲವಲ್ಲ...' ಎಂದೆ. 'ಅದೇ ಅಜ್ಜಾ, ಕರ್ನನನ್ನು ಹುಟ್ಟಿದ ಕೂಡಲೇ ಬುಟ್ಟಿಯಲ್ಲಿಟ್ಟು ನೀರಿಗೆ ಬಿಡ್ತಾಳಲ್ಲ ಅವಳು...' ಎಂದಳು. ಓ, ಬಗೆಹರಿಯಿತು. ಇದು ಮಹಾಭಾರತದ ಕುಂತಿಯ ಕಥೆ! 'ಅದು ಕುಂಟಿ ಅಲ್ಲಮ್ಮ. ಕುಂತಿ' ಎಂದೆ. 'ಅಯ್ಯೋ ದಡ್ಡ ಅಜ್ಜಾ, ಇಲ್ನೋಡು KUNTI–ಕುಂಟಿ. KARNA–ಕರ್ನ...' ಎಂದು ತನ್ನ ಇಂಗ್ಲಿಷ್ ಪುಸ್ತಕವನ್ನು ಮುಖಕ್ಕೆ ಹಿಡಿದಳು. ಅಯ್ಯೊ ಇವರ ಭಾಷಾ ಜ್ಞಾನವೆ ಎಂದು ಹಳಿದು ಸುಮ್ಮನಾದೆ.

**ಕೆ. ಶ್ರೀನಿವಾಸರಾವ್**